

ಬಹುಶಃ ಪ್ರೇಮದ ಒಂದು ಪಕ್ವ ಹಂತದಲ್ಲಿ ಕಾಮ ಹುಟ್ಟುವುದಿಲ್ಲ.

ಇನ್ನು ಆಸ್ತಿ...ಅದರ ಬಗ್ಗೆ ಆಸ್ಥೆ ಅಥವಾ ಅದು ಕೊಟ್ಟಿರುವ ಕಂಫರ್ಟ್ ಬಗ್ಗೆ ನನಗೆ ಆಸಕ್ತಿ ಅಥವಾ ಕಾಳಜಿಯಿದ್ದರೆ ತಪ್ಪೇನಿದೆ, ಕೆಲಸವಿಲ್ಲದ ಒಬ್ಬ ಬರಿದೇ ಬರಹಗಾರನಿಗೆ ಈ ನಡುವಯಸ್ಸಿನಲ್ಲಿ ಎಲ್ಲೋ ಹೋಗಿ, ಕೆಲಸ ಹುಡುಕಿ ಬದುಕು ಕಟ್ಟಿಕೊಳ್ಳುವುದಕ್ಕಿಂತ ಹೀಗೆ ಹೆಂಡತಿಯ ದುಡ್ಡಿನಲ್ಲಿ ಆರಾಮಾಗಿದ್ದುಕೊಳ್ಳುವ ಅನಿಸಿದ್ದರೆ, ಅವಳಿಗೆ ಒಬ್ಬ ಗೆಳೆಯನಿದ್ದರೆ ಇರಲಿ ಇಟ್ಟುಕೊಳ್ಳಲಿ, ನನ್ನ ಸುದ್ದಿಗೆ ಬರದಿದ್ದರೆ ಸರಿ ಅಂತ ಅನಿಸಿದರೆ ಅದು ತಪ್ಪೇ? ಇದರಲ್ಲಿ ಯಾವುದು ಹಿಪೋಕ್ರಸಿ, ತಿಳಿದೂ ತಿಳಿಯದಂತೆ ಸುಮ್ಮನಿದ್ದುದೆ ಅಥವಾ ಇದು ಸಹಜ ಎಂದು ಮನದಾಳದಿಂದ ಒಪ್ಪಿಕೊಂಡಿರುವುದೆ? ಅಥವಾ..ಒಂದುವೇಳೆ ಶಾಂತಿಯ ಬಳಿ ಆಸ್ತಿ ಇರದೇ ಅವಳು ನನ್ನ ಮೇಲೆ ಡಿಪೆಂಡ್ ಆಗಿರುವವಳಾಗಿದ್ದ ಪಕ್ಷ ನಾನು ಇಷ್ಟೊಂದು ಸಹಜವಾಗಿ ಇದನ್ನು ಸ್ವೀಕರಿಸಿರುತ್ತಿರಲಿಲ್ಲವೆ? ಇದು ಹಿಪೊಕ್ರಸಿಯೆ? ಹಾಗೆ ನೋಡಿದರೆ ಯಾವುದು ಹಿಪೊಕ್ರಸಿ ಅಲ್ಲ? ಈ ಜಗತ್ತಿನ ರೂಪಿತ ನಿಯಮಗಳಿಗನುಗುಣವಾಗಿ ನಡೆಯಲೇಬೇಕೆಂದಿದ್ದರೆ, ಅದಕ್ಕೆ ಮಾನ ಮರ್ಯಾದೆಗಳೆಂಬ ಹೆಸರಿಟ್ಟು ನಮ್ಮ ಮೇಲೆ ಪೂಸದೇ ಹೋಗಿರುತ್ತಿದ್ದರೆ ನಾವು ಹಿಪೊಕ್ರೆಟ್ಸ್ ಆಗಬೇಕಿರಲಿಲ್ಲವೇನೋ. ಈಗ ಹಾಗಿದೆಯೆ? ನದಿಗೆ ಎದುರು ಈಜುವ ತಾಕತ್ತಿಲ್ಲದಿದ್ದಮೇಲೆ ಎಲ್ಲೋ ಒಂದಿಲ್ಲ ಒಂದು ಕಡೆ ಹಿಪೊಕ್ರಿಟ್ ಆಗಲೇ ಬೇಕು ಅಲ್ವಾ?

ಅಲ್ವಾ...?

ಹೌದೂ..ಆ ಅವಳು ಬಾರಿಬಾರಿಗೆ ನಮ್ಮದೇ ಹೆಸರು ಹಾಕಿದ್ದಿ ಅಂತಿದ್ದಲ್ವಾ...ಅವಳ ಹೆಸರು ಇಂದುಮತಿ.. ಹುಡುಗನ ಹೆಸರು ಏನು ಹಾಕಿದ್ದೆ? ರಾಜೀವ? ಹೌದು ಹುಡುಗನ ಹೆಸರು ರಾಜೀವ ಅಂತಲೇ ಹಾಕಿದ್ದೆ, ಹೇಗೂ ಹುಡುಗನ ಹೆಸರು ನೆನಪಿರಲಿಲ್ಲ. ಹಾಗಾದರೆ ಬಡ್ಡೀಮಗ ತನ್ನದೇ ಕಥೆಯನ್ನ ಬೇರೆ ಯಾರದ್ದೋ ಕಥೆಯಂತೆ ಹೇಳಿಕೊಂಡಿದ್ದನೆ? ಈಗ ಎಲ್ಲಿದ್ದಾನೆ ಅವನು? ಅವತ್ತಿಗೆ ಚೆನ್ನೈಯಲ್ಲೇ ಇದ್ದ, ಈಗಲೂ ತಮಿಳುನಾಡಲ್ಲೇ ಇದ್ದಾನೆಯೆ? ನನ್ನ ಕಥೆ ಓದುತ್ತಾನೆಂದರೆ, ಬಹುಶಃ ಕರ್ನಾಟಕದಲ್ಲೇ ಇದ್ದಾನೇನೋ... ಈ ಇವಳು ಅವನ ಗೆಳತಿಯೆ? ದೂರವಿದ್ದರೂ ಹತ್ತಿರವಿರುವವರು? ಒಂದು ವೇಳೆ ಅವನೇ ಈ ಇವಳನ್ನ ನನ್ನ ಬಳಿಗೆ ಕಳಿಸಿದನೆ? ಮೊದಲು ಇವನನ್ನು ಪತ್ತೆ ಹಚ್ಚಬೇಕು? ಪತ್ತೆಹಚ್ಚಿ?... ಪತ್ತೆ ಹಚ್ಚಿ ...

ಹೊಟ್ಟೆ ತಳಮಳಿಸಿತು. ಕೂತಲ್ಲಿಂದ ಎದ್ದೆ

'ಬನ್ನಿ ಊಟಕ್ಕೆ, ಎಲ್ಲಿ ಆ ಹುಡುಗಿ?'

'ಹೊರಟೋದ್ಲು'

'ಊಟಕ್ಕ ಇರ್ತೀನಿ ಅಂದಿದ್ದಳಲ್ಲ'

'ಏನೋ ಗೊತ್ತಿಲ್ಲ'

'ಮುನಿಸಿಕೊಂಡು ಹೋದ್ಲಾ?'

'ಗೊತ್ತಿಲ್ಲ'

'ನಾನೊಂದೇಳ್ಲಾ, ನಂ ಆಲಿಂಡಿಯಾ ರೇಡಿಯೋ ಸೀತಾಗೂ ನಿಂಗೂ ಯಾವ್ದೇ ವ್ಯತ್ಯಾಸ ಇಲ್ಲ. ಅವ್ಳು ಮನೆಮನೆಕಥೆನೆಲ್ಲ ಊರ್ತುಂಬಾ ಸಾರ್ಕೊಂಡು ಬರ್ತ್ತಾಳೆ, ನೀನು ಅದನ್ನೇ ಬರ್ಕೊಂಡು ಇರತೀಯ ಅಷ್ಟೆ, ಎಷ್ಟೋ ಸಲ ನೀನು ನಂ ಆಲಿಂಡಿಯಾ ರೇಡಿಯೋನ ಬಯ್ಯೋದನ್ನ ನಾನೇ ನೋಡಿದ್ದೀನಿ, ಆದರೆ ನೀನು ಮಾಡೋದೂ ಅದನ್ನೇ ಛೆ...ಹೇಳೋದೊಂದು ಮಾಡೋದೊಂದು..'

'ಹಿಪೊಕ್ರಿಟ್....' ನಾನು ಕಿರುಚುತ್ತಾ ಎದ್ದು ಟೀಪಾಯ್ ಮೇಲಿದ್ದ ಹೂಜಿಯನ್ನೆತ್ತಿ ನೆಲಕ್ಕೆ ಒಗೆದೆ.

ಅದು ಫಳ್ಳೆಂದು ಒಡೆದು ಚೂರುಚೂರಾಗಿ ಹರಡಿಕೊಂಡಿತು.

ಅರ್ಥವಾಗದ ವಿಷಾದವೊಂದು ಎದೆಯಾಳದಿಂದ ಬಂದು ಮೈಯೆಲ್ಲ ವ್ಯಾಪಿಸಿತು, ನಾನು ಮತ್ತೆ ಕುರ್ಚಿಯಲ್ಲಿ ಕುಸಿದೆ..

ತಲೆಯೊಳಗೆ ಗೋಪಣ್ಣ, ಇಂದುಮತಿ, ರಾಜೀವ, ಶಾಂತಿ, ಆಲಿಂಡಿಯಾ ರೇಡಿಯೋ ಸೀತಾ....ಎಲ್ಲರೂ ಎದ್ದು ಕೂತರು.

●